**ಪ್ರಮಾಣ ವಚನ ಬೋಧಿಸಿದ ದಿನಾಂಕಃ 15.03.2023**

**ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಈಗ ತೋರಿಸಿದ ಡಿವಿಡಿ ಪೊಲೀಸರವರು ನಮ್ಮ ಡಾಬಾದಿಂದ ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. (ಸದರಿ ಡಿವಿಡಿ ಯನ್ನು ಪ್ರತ್ಯೇಕವಾದ ಬಿಳಿ ಬಟ್ಟೆಯಲ್ಲಿ ಸೀಲು ಮಾಡಿದ್ದು, ಅದನ್ನು ಸರ್ಕಾರಿ ಅಭಿಯೋಜಕರ ಮನವಿ ಮೇರೆಗೆ, ಸೀಲ್ ನ್ನು ಒಡೆದು ಸಾಕ್ಷಿಗೆ ತೋರಿಸಲಾಯಿತು.) ಘಟನೆ ಆದ ನಂತರ ಪೊಲೀಸರವರು ಪೊಲೀಸ್ ಠಾಣೆಗೆ ನನ್ನನ್ನು ಕರೆಸಿರುವುದಿಲ್ಲ. ಈ ಕೇಸಿಗೆ ಸಂಬಂಧಪಟ್ಟಂತೆ ನಾನು ಪೊಲೀಸರ ಮುಂದೆ ಯಾವುದೇ ಮರುಹೇಳಿಕೆಯನ್ನು ಕೊಟ್ಟಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಕಡತದಲ್ಲಿರುವ ಅಂಶಗಳನ್ನು ಪರಿಗಣಿಸಲಾಗಿ ಸಾಕ್ಷಿದಾರರು ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿಯುತ್ತಿರುವುದು ಕಂಡುಬರುತ್ತದೆ. ಈ ಕಾರಣದಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರನ್ನು ಪಾಟೀ ಸವಾಲಿಗೆ ಒಳಪಡಿಸಲು ಮಾನ್ಯ ಸರ್ಕಾರಿ ಅಭಿಯೋಜಕರಿಗೆ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ಈಗ ತೋರಿಸಿದ ಮುದ್ದೆಮಾಲು-6 ಚಾಕುವಿನಿಂದಲೇ 1 ನೇ ಆರೋಪಿ ನನ್ನ ಮತ್ತು ನನ್ನ ಹೆಂಡತಿ ಮೃತೆ ಕವಿತಾ ಮೇಲೆ ಹಲ್ಲೆ ಮಾಡಿರುತ್ತಾನೆ ಎಂದರೆ ಸರಿಯಲ್ಲ. ದಿನಾಂಕ 21.11.2017 ರಂದು ಪೊಲೀಸರವರು ನನ್ನ ಮೊಬೈಲಿಗೆ ಕರೆ ಮಾಡಿ ಮೂರು ಜನ ಆರೋಪಿತರನ್ನು ಬಂಧಿಸಿರುತ್ತೇವೆ, ನೀವು ಠಾಣೆಗೆ ಬಂದು ಅವರನ್ನು ಗುರುತಿಸಬೇಕು ಎಂದು

ಹೇಳಿದರು ಎಂದರೆ ಸರಿಯಲ್ಲ. ನಾನು ಠಾಣೆಗೆ ಹೋದಾಗ ಪೊಲೀಸರವರು ನನಗೆ 1 ರಿಂದ 3 ನೇ ಆರೋಪಿತರನ್ನು ತೋರಿಸಿದರು ಎಂದರೆ ಸರಿಯಲ್ಲ. ಆಗ ನಾನು 1 ರಿಂದ 3 ನೇ ಆರೋಪಿತರನ್ನು ಗುರುತಿಸಿ, 2 ನೇ ಆರೋಪಿ ನನಗೆ ಮತ್ತು ಮೃತ ಕವಿತಾ ಗೆ ಚಾಕು ಹಾಕಿರುತ್ತಾನೆ ಮತ್ತು 3 ನೇ ಆರೋಪಿ ಕೇಶವ್ ಮೂರ್ತಿ ನನಗೆ ಮತ್ತು ಮೃತ ಕವಿತಾ ಗೆ ಖಾರದ ಪುಡಿ ಎರಚಿ ಓಡಿ ಹೋಗಿರುತ್ತಾನೆ ಎಂದು ಪೊಲೀಸರಿಗೆ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ.

2. ದಿನಾಂಕ 19.12.2017 ರಂದು ಪೊಲೀಸರವರು ನನಗೆ ಕರೆ ಮಾಡಿ, 4 ನೇ ಆರೋಪಿಯನ್ನು ದಸ್ತಗಿರಿ ಮಾಡಿರುತ್ತೇವೆ, ನೀವು ಠಾಣೆಗೆ ಬಂದು ಆತನನ್ನು ಗುರುತಿಸಬೇಕು ಎಂದು ಹೇಳಿದರು ಎಂದರೆ ಸರಿಯಲ್ಲ. ನಂತರ ನಾನು ಠಾಣೆಗೆ ಹೋಾಗಿ 4 ನೇ ಆರೋಪಿಯನ್ನು ಗುರುತಿಸಿ, 4 ನೇ ಆರೋಪಿ ಡಾಬಾದಲ್ಲಿ ಗಲಾಟೆ ಮಾಡಿ, ಡಾಬಾದಲ್ಲಿನ ಸಾಮಾನುಗಳನ್ನು ಟಾಟಾ ಎ.ಎಸ್ ವಾಹನಕ್ಕೆ ತುಂಬಿ, ಡಾಬಾದಲ್ಲಿದ್ದ ಶೂ ಗಂಟೆಗಳು, ಸಿಸಿಟಿವಿ ಕ್ಯಾಮೆರಾ ಮತ್ತು ಬೋರ್ಡ್ ಗಳನ್ನು ಒಡೆದು ಹಾಕಿರುತ್ತಾನೆ ಎಂದು ಪೊಲೀಸರಿಗೆ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ.

3. ದಿನಾಂಕ 07.01.2018 ರಂದು ಪೊಲೀಸರವರು ನನಗೆ ಕರೆ ಮಾಡಿ, 5 ನೇ ಆರೋಪಿಯನ್ನು ದಸ್ತಗಿರಿ ಮಾಡಿರುತ್ತೇವೆ, ನೀವು ಠಾಣೆಗೆ ಬಂದು ಆತನನ್ನು ಗುರುತಿಸಬೇಕು ಎಂದು ಹೇಳಿದರು ಎಂದರೆ ಸರಿಯಲ್ಲ. ನಂತರ ನಾನು ಠಾಣೆಗೆ ಹೋಗಿ, 5 ನೇ ಆರೋಪಿ ಡಾಬಾದಲ್ಲಿ ಗಲಾಟೆ ಮಾಡಿ, ಡಾಬಾದಲ್ಲಿನ ಸಾಮಾನುಗಳನ್ನು ಟಾಟಾ ಎ.ಎಸ್ ವಾಹನಕ್ಕೆ ತುಂಬಿ, ಡಾಬಾದಲ್ಲಿದ್ದ ಶೂ ಗಂಟೆಗಳು, ಸಿಸಿಟಿವಿ ಕ್ಯಾಮೆರಾ ಮತ್ತು ಬೋರ್ಡ್ ಗಳನ್ನು ಒಡೆದು ಹಾಕಿರುತ್ತಾನೆ ಎಂದು ಎಂದು ಪೊಲೀಸರಿಗೆ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ.

4. ನನಗೆ ಈಗ ಓದಿ ಹೇಳಿದ ರೀತಿ ಅಂದರೆ (ದಿನಾಂಕ 21.11.2017 ರಂದು -------------ಹೊಡೆದು ಹಾಕಿರುತ್ತಾನೆ) ಎಂದು ಪೊಲೀಸರ ಮುಂದೆ ದಿನಾಂಕ 18.12.2017 ರಂದು ಮುಂದುವರೆದ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿಪಿ.30 ಎಂದು ಗುರ್ತಿಸಲಾಯಿತು. ನನ್ನ ಡಾಬಾದಿಂದ ಪೊಲೀಸರವರು ನ್ಯಾಯಾಲಯದ ಮುಂದೆ ಹಾಜರುಮಾಡಿರುವ ಡಿವಿಡಿ ಯನ್ನು ವಶಪಡಿಸಿಕೊಂಡಿದ್ದರು ಸಹ ಮತ್ತು ದಿನಾಂಕ 21.11.2017 ರಂದು, 19.12.2017 ರಂದು ಮತ್ತು 07.01.2018 ರಂದು ಠಾಣೆಗೆ ಹೋಗಿ ಆರೋಪಿತರನ್ನು ಗುರುತಿಸಿದ್ದರು ಸಹ, ಮುದ್ದೆಮಾಲು-6 ಚಾಕುವಿನಿಂದಲೇ 2 ನೇ ಆರೋಪಿ ನನ್ನ ಮೇಲೆ ಹಲ್ಲೆ ಮಾಡಿ ಮತ್ತುನನ್ನ ಹೆಂಡತಿ ಕವಿತಾ ಮೇಲೆ ಚಾಕುವಿನಿಂದ ಚುಚ್ಚಿ ಕೊಲೆ ಮಾಡಿದ್ದರು ಸಹ, ನಾನು ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಈ ದಿವಸ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಎಮ್.ಪಿ. ವಕೀಲರಿಂದ ಆರೋಪಿತರ ಪರವಾಗಿಃ**

**ಶ್ರೀ ಎಮ್.ಪಿ. ವಕೀಲರು ಹಾಜರಿದ್ದು ಪಾಟಿ-ಸವಾಲು ಮಾಡಲು ಸಮಯಾವಕಾಶ ಕೋರಿದ್ದರಿಂದ ಸಾಕ್ಷಿಯ ಪಾಟೀ-ಸವಾಲನ್ನು ಮುಂದೂಡಲಾಯಿತು.**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ರವೀಂದ್ರ. ಆರ್)
6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.